# ಕರ್ನಲ್ ಸೋಫಿಯಾ



■ ಪ್ರವೀಣ ಕುಲಕರ್ಣಿ

"ದೇವಿಯೋ ಔರ್ ಸಜ್ಜನೋ (ಮಹಿಳೆಯರೇ, ಮಹನೀಯರೇ), ಎಲ್ಲರಿಗೂ ಸುಪ್ರಭಾತ. ನಾನು ಕರ್ನಲ್ ಸೋಫಿಯಾ ಖುರೇಷಿ. ನನ್ನ ಜೊತೆ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಇದ್ದಾರೆ. ನಾವೀಗ ಮೇ 6ರ ರಾತ್ರಿ ನಡೆದ 'ಆಪರೇಷನ್ ಸಿಂಧೂರ' ಕುರಿತು ಮಾಹಿತಿ ನೀಡಲಿದ್ದೇವೆ. ಪಹಲ್ಗಾಮ್‌ನಲ್ಲಿ ಮುಗ್ಧರ ಸಾವಿಗೆ ಕಾರಣರಾದ ಉಗ್ರರ ಒಂಬತ್ತು ನೆಲೆಗಳನ್ನು ನಮ್ಮ ಸಶಸ್ತ್ರ ಪಡೆಗಳು ಸಂಪೂರ್ಣವಾಗಿ ನಿರ್ನಾಮ ಮಾಡಿವೆ..."

ಕರ್ನಲ್ ಮೇಡಂ ಅವರ ಕಂಚಿನ ಕಂಠದಲ್ಲಿ ಕೇಳಿ ಬರುತ್ತಿದ್ದ ಈ ಮಾತುಗಳನ್ನು ಇಡೀ ದೇಶ ಮೈಯೆಲ್ಲಾ ಕಿವಿಯಾಗಿ ಕೇಳಿಸಿಕೊಳ್ಳುತ್ತಿತ್ತು. 'ಆಪರೇಷನ್ ಸಿಂಧೂರ' ಕುರಿತು ಮಾಹಿತಿ ನೀಡಲು ಆಯ್ಕೆ ಮಾಡಲಾದ ಇಬ್ಬರು ಮಹಿಳಾ ಅಧಿಕಾರಿಗಳಲ್ಲಿ ಸೋಫಿಯಾ ಕೂಡ ಒಬ್ಬರು. ಭಾರತದ ಈ ಹೆಮ್ಮೆಯ ಪುತ್ರಿ ಬೆಳಗಾವಿಯ ಸೊಸೆ ಎನ್ನುವುದು ಕನ್ನಡಿಗರಿಗೆ ಇನ್ನಷ್ಟು ಖುಷಿ ತಂದ ಸಂಗತಿ. ಸಿಂಧೂರ ಕಾರ್ಯಾಚರಣೆಯ ಬಾತ್ಮೀದಾರರಾಗಿರುವ ಕರ್ನಲ್ ಸೋಫಿಯಾ ಹಾಗೂ ವಿಂಗ್ ಕಮಾಂಡರ್ ವ್ಯೋಮಿಕಾ ಅವರು, ಕಾರ್ಯಾಚರಣೆಯ ದೈನಂದಿನ ಮಾಹಿತಿಯನ್ನು, ಎಷ್ಟು ಹೇಳಬೇಕೋ ಅಷ್ಟನ್ನು, ಜಗತ್ತಿನ ಮುಂದೆ ನಿಖರವಾಗಿ ಇಡುತ್ತಿರುವ ರೀತಿ ಎಲ್ಲರ ಗಮನ ಸೆಳೆದಿದೆ.

ಸೋಫಿಯಾ ಅವರು ದೇಶದ ಗಮನ ಸೆಳೆದಿರುವುದು ಇದೇ ಮೊದಲ ಬಾರಿಯೇನೂ ಅಲ್ಲ. ಹಲವು ದೇಶಗಳು ಪಾಲ್ಗೊಂಡಿದ್ದ ಸೇನಾಭ್ಯಾಸದಲ್ಲಿ ಭಾರತೀಯ ಸೇನಾ ತುಕಡಿಯನ್ನು ಮುನ್ನಡೆಸಿದವರು ಅವರು. ಕಾಂಗೊ ಶಾಂತಿಪಾಲನಾ ಪಡೆಯಲ್ಲೂ ಇದ್ದವರು. ಹೌದು, ಅವರು ಯೋಧರ ಕುಟುಂಬದ ಹಿನ್ನೆಲೆಯನ್ನೂ ಹೊಂದಿದವರು. ಹೀಗಾಗಿ ಚಿಕ್ಕ ವಯಸ್ಸಿನಿಂದಲೇ ಯೋಧರ ತ್ಯಾಗ, ಬಲಿದಾನಗಳ ಕಥೆಗಳನ್ನು ಕೇಳುತ್ತಲೇ ಬೆಳೆದವರು. ಸೋಫಿಯಾ ಹಾಗೂ ಅವರ ಅವಳಿ ಸಹೋದರಿ ಶೈನಾ ಇಬ್ಬರಿಗೂ ಸೇನೆಗೆ ಸೇರಬೇಕೆಂಬ ಆಸೆ ಬಾಲ್ಯದಿಂದಲೂ ಇತ್ತು. ಗುಜರಾತ್‌ನ ವಡೋದರದ ಹುಡುಗಿ ಸೋಫಿಯಾ ಜೀವರಸಾಯನ ಶಾಸ್ತ್ರದಲ್ಲಿ ಎಂಎಸ್ಸಿ ಪದವಿಯನ್ನು ಪಡೆದವರು. ಬೆಂಗಳೂರಿನ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ (ಡಿಆರ್‌ಡಿಒ) ಸೇರಬೇಕು, ಡಾ. ಎಪಿಜೆ ಅಬ್ದುಲ್ ಕಲಾಂ ಅವರೊಂದಿಗೆ ಕೆಲಸ ಮಾಡಬೇಕು ಎಂದು ಹಂಬಲಿಸಿದವರು ಆಕೆ. ಅಮೆರಿಕ ಸೇರಿದಂತೆ ವಿವಿಧ ಕಡೆಗಳಿಂದ ಒಳ್ಳೆಯ ಹುದ್ದೆಗಳ ಅವಕಾಶಗಳು ಅವರನ್ನು ಹುಡುಕಿಕೊಂಡು ಬಂದರೂ ಭಾರತ ಬಿಟ್ಟು ಹೋಗುವುದಿಲ್ಲ ಎಂಬ ಅಭಿಮಾನ ಮೆರೆದ ಅವರು, ಮೊದಲ ಯತ್ನದಲ್ಲೇ ಸೇನೆಗೆ ಸೇರುವಲ್ಲಿ ಯಶಸ್ವಿಯಾದವರು. ಶೈನಾ ಕೂಡ ಕಾಲೇಜು ದಿನಗಳಲ್ಲಿ ಎನ್‌ಸಿಸಿ ಕೆಡೆಟ್ ಆಗಿದ್ದರೂ ಅವರಿಗೆ ಸೇನೆ ಸೇರಲು ಸಾಧ್ಯವಾಗಲಿಲ್ಲ.

ಸೋಫಿಯಾ ಅವರ ಅಜ್ಜ ಮತ್ತು ತಂದೆ ಇಬ್ಬರೂ ಸೇನೆಯಲ್ಲಿ ಇದ್ದವರು. ಈ ಕರ್ನಲ್ ಮೇಡಂ ಅವರ ಅಜ್ಜ, ಸೇನೆಯಲ್ಲಿ ನೈತಿಕ ಸ್ಥೈರ್ಯ ತುಂಬುವ ಬೋಧಕರಾಗಿದ್ದವರು. ಹೀಗಾಗಿ ಅವರೊಬ್ಬ ಕಥೆಗಳ ಕಣಜವಾಗಿದ್ದವರು. ಅವರ ಅಜ್ಜಿ ಕೂಡ ಅಂತಹ ಕಥೆಗಳನ್ನು ಹೇಳಬಲ್ಲವರಾಗಿದ್ದರು. ರಾಣಿ ಲಕ್ಷ್ಮಿಬಾಯಿ ಅವರ ಕಥೆಯನ್ನು ಅಜ್ಜಿಯ ತೊಡೆಯ ಮೇಲೆ ಕುಳಿತು ಕೇಳಿದ ನೆನಪು ಸೋಫಿಯಾ ಅವರಿಗೆ ಇನ್ನೂ ಹಸಿರಾಗಿದೆ. 'ದೇಶವನ್ನು ರಕ್ಷಿಸುವುದು ನಮ್ಮ ಜವಾಬ್ದಾರಿ' ಎಂದು ಅಜ್ಜ ಹೇಳುತ್ತಿದ್ದ ಮಾತು ಅವರ ಕಿವಿಯಲ್ಲಿ ಇನ್ನೂ ಗುಂಯ್‌ಗುಡುತ್ತಿದೆಯಂತೆ. ಸೇನೆಯಲ್ಲಿ ಮಹಿಳೆಯರಿಗೆ ಕಾಯಂ ನೇಮಕಾತಿ ಸಿಗಬೇಕೆಂಬ ಬಹುಕಾಲದ ಬೇಡಿಕೆಯನ್ನು ಈಡೇರಿಸಿಕೊಳ್ಳುವಲ್ಲಿ ಹೋರಾಡಿದವರು ಸೋಫಿಯಾ. ಸೇನೆಯಲ್ಲಿ ಮಹಿಳೆಯರಿಗೆ ಕಾಯಂ ನೇಮಕಾತಿ ಕಲ್ಪಿಸುವಂತೆ ಆದೇಶಿಸಿದ ಸುಪ್ರೀಂ ಕೋರ್ಟ್, ತನ್ನ ತೀರ್ಪಿನಲ್ಲಿ ಸೋಫಿಯಾ ಅವರ ಸಾಧನೆಯನ್ನು ಉಲ್ಲೇಖಿಸಿತ್ತು. 'ಮೊದಲ ಬಾರಿಗೆ ಭಾರತವು ದೊಡ್ಡಮಟ್ಟದಲ್ಲಿ ಆಯೋಜಿಸಿದ್ದ ಎಕ್ಸರ್‌ಸೈಜ್ ಫೋರ್ಸ್–18 ಹೆಸರಿನ ವಿವಿಧ ದೇಶಗಳ ಸೇನಾಭ್ಯಾಸದಲ್ಲಿ ಭಾರತ ತಂಡವನ್ನು ಲೆಫ್ಟಿನೆಂಟ್ ಕರ್ನಲ್ ಸೋಫಿಯಾ ಖುರೇಷಿ ಅವರೇ ಮುನ್ನಡೆಸಿದ್ದಾರೆ' ಎಂದು ಪ್ರಶಂಸಿಸಿತ್ತು.

'2006ರಲ್ಲಿ ಕಾಂಗೊದಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಯಲ್ಲಿ ಸೋಫಿಯಾ ಅವರು ಪಾಲ್ಗೊಂಡಿದ್ದರು. ಆ ವೇಳೆ ಕದನ ವಿರಾಮ ಉಲ್ಲಂಘನೆಯಂತಹ ಘಟನೆಗಳ ಮೇಲ್ವಿಚಾರಣೆ ಮತ್ತು ಮಾನವೀಯ ನೆರವು ಚಟುವಟಿಕೆಗಳ ನೇತೃತ್ವವನ್ನು ಅವರು ವಹಿಸಿದ್ದರು' ಎಂದು ಕೂಡ ಕೋರ್ಟ್ ಉಲ್ಲೇಖಿಸಿತ್ತು. ಮಹಿಳೆ ಎಂತಹ ಜವಾಬ್ದಾರಿಯನ್ನಾದರೂ ನಿಭಾಯಿಸಬಲ್ಲಳು ಎಂಬುದಕ್ಕೆ ಸೋಫಿಯಾ ಅವರ ಸಾಧನೆಯನ್ನು ಕೋರ್ಟ್ ನಿದರ್ಶನವಾಗಿ ಒದಗಿಸಿತ್ತು. ಯುದ್ಧಭೂಮಿಯಲ್ಲೂ ಕೆಲಸ ಮಾಡಿದ ಅನುಭವವಿರುವ ಅವರು, 'ಆಪರೇಷನ್ ಪರಾಕ್ರಮ'ನಲ್ಲೂ ಪಾಲ್ಗೊಂಡವರು. ಸೋಫಿಯಾ ಅವರಿಗೆ ಹುದ್ದೆಗಳು ಒಲಿದು ಬಂದಿರುವುದು ಅವರ ಸಾಮರ್ಥ್ಯದಿಂದಲೇ ಹೊರತು ಅವರು ಮಹಿಳೆ ಎಂಬ ಕಾರಣಕ್ಕೆ ಅಲ್ಲ ಎಂದು ಲೆಫ್ಟಿನೆಂಟ್ ಜನರಲ್ ಬಿಪಿನ್ ರಾವತ್ ಸಹ ಅವರ ಸಾಮರ್ಥ್ಯವನ್ನು ಕೊಂಡಾಡಿದ್ದರು. ಇಂತಹ ಹೆಮ್ಮೆಯ ಕರ್ನಲ್, ತಮ್ಮ ಬಾಳಸಂಗಾತಿಯನ್ನಾಗಿ ಆಯ್ದುಕೊಂಡಿದ್ದು ಬೆಳಗಾವಿ ಜಿಲ್ಲೆ ಗೋಕಾಕ್ ತಾಲ್ಲೂಕು ಕೊಣ್ಣೂರಿನ ತಾಜುದ್ದೀನ್ ಬಾಗೇವಾಡಿ ಅವರನ್ನು. ಅವರೂ ಸೇನೆಯಲ್ಲಿ ಕರ್ನಲ್ ಆಗಿದ್ದಾರೆ. ಇಬ್ಬರೂ ಪ್ರೀತಿಸಿ ಮದುವೆಯಾಗಿದ್ದಾರೆ.

ತಮ್ಮ ಸೊಸೆಯು ಸಿಂಧೂರ ಕಾರ್ಯಾಚರಣೆ ಕುರಿತು ಅಮಿತ ಆನಂದದಲ್ಲಿರುವ ತಾಜುದ್ದೀನ್ ಅವರ ತಂದೆ ಗೌಸ್‌ಸಾಬ್ ಅವರಿಗೀಗ ಸೊಸೆಗೆ 'ಭಲೇ ಕೂಸೆ' ಎಂದು ಶಹಬ್ಬಾಸ್‌ಗಿರಿ ಕೊಡುವ ಆಸೆಯಂತೆ. 'ಪಾಕಿಸ್ತಾನದಂಥ ದುಷ್ಟ ದೇಶ ಇನ್ನೊಂದಿಲ್ಲ. ಉಗ್ರರಿಗೆ ಆಶ್ರಯ ಕೊಟ್ಟ ದೇಶ ನಾಶವಾಗುತ್ತದೆ. ಅಮಾಯಕರ ಕೊಂದವರು ದುರ್ಮರಣಕ್ಕೆ ಈಡಾಗುತ್ತಾರೆಯೇ ಹೊರತು ಅವರಿಗೆ ದೈವಮರಣವೇನೂ ಸಿಗುವುದಿಲ್ಲ. ಕೊಲ್ಲುವವರನ್ನು ಖುದಾ ಕ್ಷಮಿಸುವುದಿಲ್ಲ. ದೇಶದ ವಿಷಯ ಬಂದಾಗ ನಾವೆಲ್ಲರೂ ಒಂದೇ' ಎನ್ನುವ ಅವರು ದೊಡ್ಡ ವ್ಯಕ್ತಿಯಾಗಿ ಕಾಣುತ್ತಾರೆ. ಸೋಫಿಯಾ ಆಗಾಗ ಕೊಣ್ಣೂರಿಗೆ ಬರುತ್ತಾರಂತೆ. 'ನಮ್ಮ ಸೊಸೆಗೆ ಒಂದಿನಿತೂ ಅಹಂ ಭಾವ ಇಲ್ಲ' ಎಂದೂ ಅವರು ಕೊಂಡಾಡುತ್ತಾರೆ. ಗೌಸ್‌ಸಾಬರ ಮಾತು ಕೇಳುತ್ತಾ ಹೋದಂತೆ ಸೋಫಿಯಾ ಜೊತೆ ಅವರ ಬಗೆಗೂ ಹೆಮ್ಮೆ ಮೂಡುತ್ತದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65